10

# ಪರಿಶುದ್ಧಾನು ಹಾಗೂ ಕ್ರೈಸ್ತರು

*"ಶರೀರಭಾವವನ್ನು ಅನುಸರಿಸುವವರು ಅದಕ್ಕೆ ಸಂಬಂಧ ಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಪರಿಶುದ್ಧಾತ್ಮನನ್ನನುಸರಿಸುವವರು ಪರಿಶುದ್ಧಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಶರೀರ ಭಾವದವುಗಳ ಮೇಲೆ ಮನಸ್ಸಿಡುವುದು ಮರಣ; ಪರಿಶುದ್ಧಾತ್ಮನವುಗಳ ಮೇಲೆ ಮನಸ್ಸಿಡುವುದು ಜೀವವೂ ಮನಶ್ಶಾಂತಿಯೂ ಆಗಿದೆ. ಯಾಕಂದರೆ ಶರೀರ ಭಾವದವುಗಳ ಮೇಲೆ ಮನಸ್ಸಿಡುವುದು ದೇವರಿಗೆ ಶತ್ರುತ್ವವು; ಅಂಥ ಮನಸ್ಸು ದೇವರ ನಿಯಮಕ್ಕೆ ಒಳಪಡುವದೂ ಇಲ್ಲ, ಒಳಪಡುವದಕ್ಕಾಗುವದೂ ಇಲ್ಲ" (ರೋಮಾಪುರ 8:5-7).*

ಪರಿಶುದ್ಧಾತ್ಮನು ಆಂತರ್ಯದಲ್ಲಿ ವಾಸಿಸುವದರ ಬಗ್ಗೆ ನಾವು ಆಗಲೇ ಅಭ್ಯಾಸ ಮಾಡಿದ್ದೇವೆ. ಮುಂದೆ, ನಾವು ಕ್ರೈಸ್ತರಿಗೆ ಸಂಬಂಧಿಸಿ ಪರಿಶುದ್ಧಾತ್ಮನ ಇತರ ವಿಷಯಗಳನ್ನು ನಾವು ವಿಚಾರಿಸುತ್ತೇವೆ. ಇಂದು ಕ್ರೈಸ್ತರ ಜೀವಿತಗಳಲ್ಲಿ ಪರಿಶುದ್ಧಾತ್ಮನು ಕಾರ್ಯನಿರತವಾಗಿರುವನೋ? ಹಾಗಿದ್ದರೆ, ಆತನು ಏನು ಮಾಡುವನು?

### ಒಂದು ಆತ್ಮಿಕ ಜಲಾಶಯವನ್ನು ಒದಗಿಸುವನು

ಮೊದಲಾಗಿ, ಪರಿಶುದ್ಧಾತ್ಮನು ಆಂತರ್ಯದ ಆತ್ಮಿಕ ಪುನರುಜ್ಜೀವನದ ಮೂಲವಾಗಿದ್ದಾನೆ. "ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು. ಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ ಪರಿಶುದ್ಧಾತ್ಮನನ್ನು ಕುರಿತು ಹೇಳಿದನು ..." ಎಂದು ಯೋಹಾನ 7:38, 39ರಲ್ಲಿ ಹೇಳಿರುವುದು. ಆಂತರಿಕ ಉಗಮವಿಲ್ಲದ ಆದರೆ ಹೊರಗಿನಿಂದ ತುಂಬಿಸಲ್ಪಡುವ ನೀರಿನ ತೊಟ್ಟಿಗೆ ವಿರುದ್ಧವಾಗಿ, ಒಂದು ಬುಗ್ಗೆಯು ಆಂತರಿಕ ಉಗಮದ ಕಾರಣ ಸತತವಾಗಿ ಹರಿಯುವುದು. ಪರಿಶುದ್ಧಾತ್ಮನು ಇದನ್ನು ಹೇಗೆ ಮಾಡುವನು ಎಂದು ಯೇಸು ಹೇಳಲಿಲ್ಲ, ಆತನು ಅದನ್ನು ಮಾಡುತ್ತಾನೆ ಎಂದು ಹೇಳಿದನು. ಹೇಗೆ ಎಂಬುದರ ಬಗ್ಗೆ ನಾವು ಕಲ್ಪಿಸುತ್ತಾ ಹೋಗಬಾರದು, ಆದರೆ ಆತ್ಮನ ಸಹಾಯದಿಂದ ನೀರಿನ ಸಂಗ್ರಹದ ಒಳಗಿನ ಮೂಲವು ಕ್ರೈಸ್ತನಿಗೆ ಇದೆ ಎಂಬ ಸಂಗತಿಯನ್ನು ಸ್ವೀಕರಿಸತಕ್ಕದ್ದು. ದೇವರ ವಾಕ್ಯವನ್ನು ಅಲಕ್ಷಿಸುವವರು ಇಲ್ಲವೇ ಆತನ ಚಿತ್ತಕ್ಕೆ ವ್ಯತಿರಿಕ್ತವಾಗಿ ಜೀವಿಸುವವರು, ತಮ್ಮ ಜೀವಿತಗಳಲ್ಲಿ "ಜೀವ ಜಲದ" ಆತ್ಮಿಕ ಹರಿಯುವಿಕೆಯನ್ನು ಪರಿಶುದ್ಧಾತ್ಮನು ಒದಗಿಸುವನೆಂಬುದನ್ನು ನಿರೀಕ್ಷಿಸಲಾರರು.

### ಪಾಪದ ಮತ್ತು ಮರಣದ ನಿಯಮದಿಂದ ನಮ್ಮನ್ನು ಬಿಡುಗಡೆ ಮಾಡುವನು

"ಯಾಕಂದರೆ ಜೀವವನ್ನುಂಟು ಮಾಡುವ ಪರಿಶುದ್ಧಾತ್ಮನಿಂದಾದ ನಿಯಮವು

ನಿನ್ನನ್ನು ಪಾಪ ಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸುವಿನ ಮೂಲಕ ಬಿಡಿಸಿತು. ಧರ್ಮಶಾಸ್ತ್ರವು ನಮ್ಮ ಶರೀರಾಧೀನ ಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡಿದನು. ಏನಂದರೆ ಆತನು ಪಾಪ ನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮಾರಣದಂಡನೆಯನ್ನು ವಿಧಿಸಿದನು'' ಎಂದು ರೋಮಾಪುರ 8:2, 3ರಲ್ಲಿ ಓದುತ್ತೇವೆ. ಮೋಶೆಯ ನಿಯಮವು, ಹೃದಯದ ಮೇಲೆ ಅಲ್ಲ, ಆದರೆ ಕಲ್ಲಿನ ಮೇಲೆ ಬರೆದ ನಿಯಮಗಳು ಮರಣವನ್ನು ತಂದವು (2 ಕೊರಿಂಥ 3:6). ಬಹಳ ಸಲ, ದೇವರ ನಿಯಮಗಳು ಕಲ್ಲಿನ ಮೇಲೆ ಅಕ್ಷರಗಳಾಗಿ ಉಳಿದವು ಮತ್ತು ಆತನ ಜನರಿಂದ ಆತನ ಚಿತ್ತವನ್ನು ಅನುಸರಿಸಲಿಕ್ಕೆ ಆಂತರಿಕ ಅಪೇಕ್ಷೆಯೊಳಗೆ ಬದಲಾಯಿಸಲ್ಪಡಲಿಲ್ಲ (ರೋಮಾಪುರ 2:27-29). ‘‘ಹೊರಗಣ ಅರ್ಥಕ್ಕೆ ಅನುಕೂಲವಾದ ಹಳೇ ರೀತಿಯಲ್ಲಿ ಅಲ್ಲ, ಆದರೆ ಪರಿಶುದ್ಧಾತ್ಮ ಪ್ರೇರಿತವಾದ ಹೊಸ ರೀತಿಯಲ್ಲಿ ಸೇವಿಸುವದಕ್ಕಾಗುವಂತೆ'' ಕ್ರೈಸ್ತರಾದ ನಾವು ಧರ್ಮಶಾಸ್ತ್ರದಿಂದ ಬಿಡುಗಡೆ ಹೊಂದಿದ್ದೇವೆ (ರೋಮಾಪುರ 7:6ಬಿ). ನಾವು ಪರಿಶುದ್ಧಾತ್ಮನೊಂದಿಗೆ ಸಹಕರಿಸಿದರೆ, ನಮ್ಮ ಹೃದಯ ಸುನ್ನತಿಯಾಗಲು ಆತನು ಸಹಾಯ ಮಾಡುವನು. ಪಾಪ ಮತ್ತು ಮರಣದ ನಿಯಮದಿಂದ ನಾವು ಬಿಡುಗಡೆ ಹೊಂದುವಂತೆ ನಮ್ಮ ಪಾಪಭರಿತ ದುರಿಚ್ಛೆಗಳು ತೆಗೆದು ಹಾಕಲ್ಪಡುವವು (ರೋಮಾಪುರ 8:2).

ದೇವರ ವಾಕ್ಯವು (2 ತಿಮೊಥೆ 3:16, 17) ಪರಿಶುದ್ಧಾತ್ಮನೊಂದಿಗೆ ಹೇಗೆ ಸಹಕರಿಸಬೇಕು ಎಂಬುದನ್ನು ಕಲಿತುಕೊಳ್ಳಲಿಕ್ಕೆ ತಳಹದಿಯಾಗಿರುವುದು. ಲೋಕ ವನ್ನು ಜಯಿಸಲು ಮತ್ತು ವಾಕ್ಯಕ್ಕೆ ಅಂಟಿಕೊಳ್ಳಲು ಮಾಡುವ ನಮ್ಮ ಪ್ರಯತ್ನದಲ್ಲಿ - ಆದರೆ ಪ್ರಯತ್ನವನ್ನು ನಾವೇ ಮುಂದಿಡಲು ಸಿದ್ಧರಿರುವಾಗ (2 ಕೊರಿಂಥ 7:1) ಆತನು ನಮಗೆ ಬಲವನ್ನು ಕೊಡುವನು (ಎಫೆಸ 3:16; 1 ಯೋಹಾನ 4:4).

## ನಮ್ಮನ್ನು ನಡಿಸುವನು

ಮೂರನೆಯದು, ಪರಿಶುದ್ಧಾತ್ಮನು ಕ್ರೈಸ್ತರನ್ನು ನಡಿಸುವನು ‘‘ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು'' (ರೋಮಾಪುರ 8:14). ಪ್ರಶ್ನೆಯು ‘‘ಪರಿಶುದ್ಧಾತ್ಮನಿಂದ ನಾವು ನಡಿಸಲ್ಪಡ ಬಹುದೋ?'' ಎಂಬುದಲ್ಲ ಆದರೆ ‘‘ಪರಿಶುದ್ಧಾತ್ಮನಿಂದ ನಾವು ಹೇಗೆ ನಡಿಸಲ್ಪಡುತ್ತೇವೆ?'' ಎಂಬುದಾಗಿದೆ. ಕ್ರೈಸ್ತರಂತೆ ನಮ್ಮ ಆತ್ಮಿಕ ಜನನವು ವಾಕ್ಯದ ಮುಖಾಂತರ ಬರುತ್ತದೆ (1 ಪೇತ್ರ 1:23). ಯೇಸುವಿನ ಆಜ್ಞೆಗಳು ನಮಗೆ ಕಲಿಸಲ್ಪಡದಿದ್ದರೆ ಆತನಿಗೆ ನಾವು ಹೇಗೆ ವಿಧೇಯರಾಗಿರ ಬೇಕೆಂಬು ದನ್ನು ತಿಳಿಯಲಾರೆವು (ಮತ್ತಾಯ 28:20).

ಅಪೊಸ್ತಲರಿಗೆ ಮತ್ತು ಪ್ರವಾದಿಗಳಿಗೆ (ಎಫೆಸ 3:3-5) ಆತ್ಮನು ಯೇಸುವಿನ ವಾಕ್ಯವನ್ನು ಒಪ್ಪಿಸಿದನು (ಯೋಹಾನ 14:26). ಆ ವಾಕ್ಯವನ್ನು ಅನುಸರಿಸುವವರು ಪರಿಶುದ್ಧಾತ್ಮ ನಿಂದ ನಡಿಸಲ್ಪಡುವರು, ಆದರೆ ಮಾನವ ಬೋಧನೆಗಳನ್ನು ಅನುಸರಿಸುವವರು ಮನುಷ್ಯರಿಂದ ನಡಿಸಲ್ಪಡುವವರು. ಪರಿಶುದ್ಧಾತ್ಮನಿಂದ ನಾವು ಜೀವಿಸ ಬೇಕಾದರೆ, ನಾವು ‘‘ಪರಿಶುದ್ಧಾತ್ಮನಿಂದ ನಡೆಯತಕ್ಕದ್ದು'' (ಗಲಾತ್ಯ 5:16, 25). ಅಂದರೆ ಪರಿಶುದ್ಧಾತ್ಮನಿಂದ ಪ್ರಕಟಿಸಲ್ಪಟ್ಟ (ಯೋಹಾನ 16:13) ಸತ್ಯದಲ್ಲಿ ನಾವು ನಡೆಯತಕ್ಕದ್ದು. (2 ಯೋಹಾನ 4; 3 ಯೋಹಾನ 3, 4). ನಾವು ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟರೆ, ನಾವು ಧರ್ಮಶಾಸ್ತ್ರದ ಅಧೀನತೆಯಲ್ಲಿರುವದಿಲ್ಲ (ಗಲಾತ್ಯ 5:18) ಆದರೆ

ಕೃಪೆಯ ಅಧೀನತೆಯಲ್ಲಿರುತ್ತೇವೆ (ರೋಮಾಪುರ 6:14). ಕೃಪೆಯ ಅಧೀನತೆಯಲ್ಲಿ ಉಳಿಯಲು, ಪರಿಶುದ್ಧಾತ್ಮನಿಂದ ಪ್ರಕಟಿಸಲ್ಪಟ್ಟ ಫಲವನ್ನು ನಾವು ಉತ್ಪಾದಿಸತಕ್ಕದ್ದು (ಗಲಾತ್ಯ 5:22, 23) ಮತ್ತು ನಮ್ಮ ಶಾರೀರಿಕ ದುರಾಶೆಗಳನ್ನು ಅನುಸರಿಸಬಾರದು (ಗಲಾತ್ಯ 5:19, 21), ಪರಿಶುದ್ಧಾತ್ಮನು ಈ ಗುಣಗಳನ್ನು ನಮಗಾಗಿ ನಮ್ಮ ಜೀವಿತಗಳಲ್ಲಿ ಇಡುವದಿಲ್ಲ; ಆತ್ಮನನ್ನು ಕುರಿತು ನಾವು ಬಿತ್ತತಕ್ಕದ್ದು ಆದರೆ ಶರೀರ ಭಾವದಿಂದ ಅಲ್ಲ (ಗಲಾತ್ಯ 6:8).

## ನಾವು ದೇವರ ಮಕ್ಕಳು ಎಂದು ಸಾಕ್ಷಿಕೊಡುವನು

ಮುಂದೆ, "ನಾವು ದೇವರ ಮಕ್ಕಳು ಆಗಿದ್ದೇವೆ ಎಂಬುದಕ್ಕೆ ಪರಿಶುದ್ಧಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ" (ರೋಮಾಪುರ 8:16) ಎಂದು ನಾವು ಓದುತ್ತೇವೆ. ಪರಿಶುದ್ಧಾತ್ಮನ ಸಾಕ್ಷಿ ಯಾದುವು ಮತ್ತು ನಮ್ಮ ಆತ್ಮದ ಸಾಕ್ಷಿ ಯಾವುದು?

ಪರಿಶುದ್ಧಾತ್ಮನು ನಮ್ಮ ಆತ್ಮಗಳಿಗೆ ಮಾತಾಡುತ್ತಿರುವನೋ ಎಂಬಂತೆ ಪರಿಶುದ್ಧಾತ್ಮನು ನಮ್ಮ ಆತ್ಮಗಳಿಗೆ ಸಾಕ್ಷಿಕೊಡುವನು ಎಂದು ಪೌಲನು ಹೇಳಲಿಲ್ಲ. ನಾವು ದೇವರ ಮಕ್ಕಳಾಗಿದ್ದೇವೆ ಎಂಬ ಸಾಕ್ಷಿಯನ್ನೇ ಕೊಡುತ್ತ ನಮ್ಮ ಆತ್ಮಗಳು ಪರಿಶುದ್ಧಾತ್ಮನೊಂದಿಗೆ ಒಪ್ಪಂದದಲ್ಲಿ ಒಂದಾಗುತ್ತವೆ.

ನಮ್ಮ ಸಾಕ್ಷಿಯು ನಮ್ಮೊಳಗೆ ನಮ್ಮ ಭರವಸೆಯಾಗಿದೆ (1 ಯೋಹಾನ 5:10), ಆದರೆ ಪರಿಶುದ್ಧಾತ್ಮನ ಸಾಕ್ಷಿಯು ಯಾವುದು? ಪರಿಶುದ್ಧಾತ್ಮನ ಸಾಕ್ಷಿಯು ಆತನು ಪ್ರಕಟಪಡಿಸಿದ ಸಂದೇಶದಲ್ಲಿ ಕಂಡು ಬರುತ್ತದೆ (ಇಬ್ರಿಯ 10:15). ಆತನ ಬಗ್ಗೆ ಮಾತಾಡುವದರಿಂದ ಯೋಸುವವನ್ನು ಕುರಿತು ಯೋಹಾನನು ಸಾಕ್ಷಿಕೊಟ್ಟನು (ಯೋಹಾನ 1:15). ಅದೇ ರೀತಿಯಲ್ಲಿ, ಸತ್ಯದ ವಾಕ್ಯದ ಪ್ರಕಟನೆಯ ಮುಖಾಂತರ ಯೇಸುವನ್ನು ಕುರಿತ ತನ್ನ ಸಾಕ್ಷಿಯನ್ನು ಪರಿಶುದ್ಧಾತ್ಮನು ಕೊಟ್ಟಿರುವನು (ಯೋಹಾನ 15:26, 27; 1 ಯೋಹಾನ 5:7). ಯೇಸುವಿನ ಮಾತುಗಳು ಜೀವದ ಮೂಲಗಳಾಗಿವೆ (ಯೋಹಾನ 6:63; 12:49, 50). ಆತ್ಮನಿಂದ ಪ್ರಕಟಿಸಲ್ಪಟ್ಟ ಯೇಸುವಿನ ಬೋಧನೆಯ ಮುಖಾಂತರ ದೇವರ ಮಕ್ಕಳಾಗುವದರಿಂದ ನಾವು ಜೀವನದ ನೂತನತೆಗೆ ಬಂದಿದ್ದೇವೆಂದು ನಮ್ಮ ಆತ್ಮಗಳು ದೃಢಪಡಿಸುವಾಗ, ನಮ್ಮ ಸಾಕ್ಷಿಯು ಪರಿಶುದ್ಧಾತ್ಮನ ಸಾಕ್ಷಿಯೊಂದಿಗೆ ಹೊಂದಿಕೊಂಡು ಹೋಗುತ್ತದೆ.

ದೇವರ ವಾಕ್ಯದ ಸತ್ಯದಿಂದ ಹೊಸದಾಗಿ ಹುಟ್ಟಿದವರು (1 ಪೇತ್ರ 1:22. 23) - ಯೇಸುವಿನಲ್ಲಿ ನಂಬಿಕೆಯ ಮುಖಾಂತರ ಬಾಪ್ತಿಸ್ಮ ಹೊಂದಿದವರು - ದೇವರ ಮಕ್ಕಳಾಗಿರುವರು (ಗಲಾತ್ಯ 3:26, 27) ಮತ್ತು ಜೀವನದ ನೂತನತೆಯಲ್ಲಿ ಪ್ರವೇಶಿಸಿರುವರು (ರೋಮಾಪುರ 6:4). ನಾವು ಈ ಸಂಗತಿಗಳನ್ನು ಮಾಡಿದ್ದರೆ ಮತ್ತು ಆತನಿಂದ ನಾವು ಹುಟ್ಟಿದ್ದ ಕಾರಣದಿಂದ ನೂತನ ಜೀವವಿದ್ದರೆ ( 1 ಯೋಹಾನ 2:29), ಆಗ ನಾವು ದೇವರ ಮಕ್ಕಳೆಂದು ನಾವು ಸಾಕ್ಷಿಕೊಟ್ಟರೆ, ನಮ್ಮ ಸಾಕ್ಷಿಯು ಆತ್ಮನ ಸಾಕ್ಷಿಯೊಂದಿಗೆ ಒಪ್ಪಿಕೊಳ್ಳುವುದು, ಹೀಗೆ ನಾವು ದೇವರ ಮಕ್ಕಳಾಗಿದ್ದೇವೆಂಬ ಭರವಸೆ ನಮಗಿರುವುದು (1 ಯೋಹಾನ 5:10). ಒಬ್ಬನು ಪರಿಶುದ್ಧ ಬರಹಗಳಿಗೆ ಉತ್ತರ ಕೊಟ್ಟಿರದಿದ್ದರೆ, ಆದರೆ ಬೇರೆ ಇತರ ಮಾರ್ಗದಿಂದ ತಾನು ದೇವರ ಮಗುವಾದೆನೆಂದು ಸಾಕ್ಷಿ ಕೊಟ್ಟರೆ, ಆಗ ಅವನ ಆತ್ಮವು ಆತ್ಮನ ಸಾಕ್ಷಿಯಂಥ ಸಾಕ್ಷಿಯನ್ನು ಕೊಡಲಾರನು. ಅವನು ತನ್ನ ರಕ್ಷಣೆಯ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿರುವನು ಎಂದು ಬೇರೆ ಮಾತಿನಲ್ಲಿ ಹೇಳಬಹುದು. ಪರಿಶುದ್ಧಾತ್ಮನಿಂದ ಕೊಡಲ್ಪಟ್ಟ ಅದೇ ಸಾಕ್ಷಿಯನ್ನು ನಮ್ಮ ಆತ್ಮಗಳು ಕೊಡುವಾಗ

ಮಾತ್ರವೇ ನಮ್ಮ ಸಾಕ್ಷಿಯು ನಿಜವಾದದ್ದಾಗುವುದು ಆ ಎರಡು ಸಾಕ್ಷಿಗಳು ಒಪ್ಪಿಕೊಳ್ಳು ವಾಗ ಮಾತ್ರವೇ ನಾವು ದೇವರ ಮಕ್ಕಳಾಗಿರುವೆವು.

## ನಮ್ಮ ಪ್ರಾರ್ಥನೆಗಳಲ್ಲಿ ಸಹಾಯ ಮಾಡುವನು

ಪರಿಶುದ್ಧಾತ್ಮನು ನಮ್ಮ ಪ್ರಾರ್ಥನೆಗಳಲ್ಲಿಯೂ ನಮಗೆ ಸಹಾಯ ಮಾಡುವನು ರೋಮಾಪುರ 8:26, 27 ಹೀಗೆ ಹೇಳುತ್ತದೆ:

> ಹಾಗೆ ಪರಿಶುದ್ಧಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ. ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪರಿಶುದ್ಧಾತ್ಮನು ತಾನೇ ಮಾತಿಲ್ಲದಂಥ ನರಳಾಟ ದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ. ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪರಿಶುದ್ಧಾತ್ಮ ಮನೋಭಾವವು ಏನೆಂದು ತಿಳಿದದೆ; ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವ ಜನರಿಗೋಸ್ಕರ ಬೇಡಿಕೊಳ್ಳುವ ನೆಂದು ಆತನು ಬಲ್ಲನು.

ಪರಿಶುದ್ಧಾತ್ಮನ ಕಾರ್ಯವು ಯೇಸುವಿನ ಕಾರ್ಯಕ್ಕೆ ಸಂಬಂಧಿಸಿದೆ, ಆತನ ಮುಖಾಂತರ "ಒಬ್ಬನೇ ಆತ್ಮನಲ್ಲಿ ತಂದೆಯ ಬಳಿಗೆ ಪ್ರವೇಶಿಸುವದಕ್ಕೆ ಮಾರ್ಗವಾ ಯಿತು" (ಎಫೆಸ 2:18). ಬಹುಶಃ ಈ ರೀತಿಯಲ್ಲಿ "ಆತ್ಮನಲ್ಲಿ" ನಾವು ಪ್ರಾರ್ಥಿಸುತ್ತೇವೆ (ಎಫೆಸ 6:18; ನೋಡಿರಿ ಯೂದ 20).

ಪ್ರಾರ್ಥನೆಯಲ್ಲಿ ನಾವು ನರಳಾಡುವಂತೆ ಪರಿಶುದ್ಧಾತ್ಮನು ಬಿಡುವದಿಲ್ಲ. ಅದರ ಬದಲು, ಕ್ರಮವಿಲ್ಲದೇ ವ್ಯಕ್ತಪಡಿಸುವ ನಮ್ಮ ಪ್ರಯತ್ನಗಳನ್ನು ದೇವರೊಂದಿಗೆ ಸಂಪರ್ಕಿಸಲು ನಮಗೆ ಸಹಾಯ ಮಾಡುತ್ತಾನೆ. ಮಾತುಗಳಲ್ಲಿ ಹೇಳಲ್ಪಡಬಾರದು ನಮ್ಮ ಆಳವಾದ ಅಗತ್ಯತೆಗಳನ್ನು ತಂದೆಗೆ ತಿಳಿಯಲ್ಪಡುವಂತೆ ಮಾರ್ಪಡಿಸುತ್ತಾನೆ. ಬಾರ್ಕ್ಲೆ ಎಮ್. ನ್ಯೂಮನ್ ಮತ್ತು ಯೂಜಿನ್ ಎ. ನೈಡಾ ಹೀಗೆ ಬರೆದಿದ್ದಾರೆ, "... ಪರಿಶುದ್ಧಾತ್ಮನು ತಂದೆಯೊಂದಿಗೆ ತಕ್ಷಣದ ಅನ್ಯೋನ್ಯತೆಯಲ್ಲಿ ನಿಂತು ಕೊಳ್ಳುತ್ತಾನೆ ಮತ್ತು ಹೀಗೆ ತನ್ನ ಆಲೋಚನೆಗಳನ್ನು ವ್ಯಕ್ತಪಡಿಸಲು ಮಾತಾಡಲ್ಪಡುವ ಮಾತುಗಳ ಅಗತ್ಯತೆಯುಳ್ಳವನಾಗಿರುವದಿಲ್ಲ."[1]

ನಮ್ಮ ಬಲಹೀನ ಪ್ರಾರ್ಥನೆಗಳ ಉದ್ದೇಶವನ್ನು ತೆಗೆದು ಕೊಳ್ಳುವದರಿಂದ ಮತ್ತು ಅವುಗಳನ್ನು ತಂದೆಗೆ ಪ್ರಕಟಿಸುವದರಿಂದ, ಒಂದು ರೀತಿಯಲ್ಲಿ ಆತನು ನಮಗಾಗಿ ಬೇಡಿಕೊಳ್ಳುತ್ತಿರುವನು. ನಮ್ಮ ಸಂಭಾಷಣೆಯನ್ನು ತಂದೆಗೆ ತಿಳಿಯುವಂತೆ ಆತನು ಮಾಡುವನು. ಹೀಗಿದ್ದರೂ ಯೇಸುವು ನಮ್ಮ ಪರವಾಗಿ ಮಧ್ಯವರ್ತಿಯಾಗಿ ಬೇಡಿಕೊಳ್ಳುತ್ತಾನೆ (1 ತಿಮೊಥೆ 2:5). ನಮಗೋಸ್ಕರವಾಗಿ ಬೇಡಿಕೊಳ್ಳುತ್ತಾನೆ (ರೋಮಾಪುರ 8:34). ಸಂದೇಶವನ್ನು ಹಸ್ತಾಂತರಿಸುವದಲ್ಲದೇ ನಮಗಾಗಿ ವಿನ್ನವಿಸುತ್ತಾನೆ (ಇಬ್ರಿಯ 7:25).

ಈ ವಾಕ್ಯವು ವಾಣಿಗಳನ್ನಾಡುವದನ್ನು ಸೂಚಿಸುವುದಿಲ್ಲ "[Franz J.] ಲೀನಹಾರ್ಟ ಗಮನಿಸುವಂತೆ, ವಾಕ್ಯಭಾಗವು ಎಲ್ಲಾ ಕ್ರೈಸ್ತರನ್ನು ಒಳಗೊಳ್ಳುವ ಉದ್ದೇಶ ವುಳ್ಳದ್ದಾಗಿದೆ, ಆದರೆ ವಾಣಿಗಳನ್ನಾಡುವುದು ಎಲ್ಲರಿಂದಲೂ ಹೊಂದಿಕೊಳ್ಳಲಾರದ ವಿಶೇಷ ದೈವಿಕ ಪ್ರಭಾವದ ವರವಾಗಿದೆ."[2]

## ಕ್ರಿಸ್ತನಲ್ಲಿ ನಮ್ಮನ್ನು ಮುದ್ರಿಸುತ್ತಾನೆ

ವಿಮೋಚನೆಯ ದಿನಕ್ಕಾಗಿ ಕ್ರಿಸ್ತನಲ್ಲಿ ಪರಿಶುದ್ಧಾತ್ಮನು ನಮಗೆ ಮುದ್ರೆ ಹಾಕುತ್ತಾನೆಂದು ಎಫೆಸ 1:13 ಹೇಳುತ್ತದೆ (ಎಫೆಸ 4:30) ಮತ್ತು ನಮ್ಮ ಹೃದಯಗಳಲ್ಲಿ "ಸಂಚಕಾರವಾಗಿ" ಕಳುಹಿಸಲ್ಪಟ್ಟಿದ್ದಾನೆ (2 ಕೊರಿಂಥ 1:22; 5:5).

ನಾವು ಯೇಸುವಿಗೆ ವಿಧೇಯರಾಗಿದ್ದರಿಂದ (ಅಪೊಸ್ತಲರ ಕೃತ್ಯ 5:32), ನಾವು ಬಾಪ್ತಿಸ್ಮ ಹೊಂದಿದಾಗ ಪರಿಶುದ್ಧಾತ್ಮನನ್ನು ಹೊಂದಿಕೊಂಡಿದ್ದೇವೆ (ಅಪೊಸ್ತಲರ ಕೃತ್ಯ 2:38). ಈ ಎರಡು ವಾಕ್ಯಭಾಗಗಳಲ್ಲಿ ಇಲ್ಲವೇ ಬೈಬಲಿನಲ್ಲಿ ಎಲ್ಲಿಯೇ ಆಗಲೀ ಆತ್ಮನ ಸಾನ್ನಿಧ್ಯವನ್ನು ನಾವು ತಿಳಿದುಕೊಳ್ಳಲಿಕ್ಕಾಗುವಂತೆ ನಮಗೆ ಒಂದು "ಭಾವನೆ" ಕೊಡಲ್ಪಟ್ಟಿದೆ ಎಂದು ಹೇಳಲ್ಪಟ್ಟಿರುವದಿಲ್ಲ. ಯೋಹಾನನ ಹೇಳಿ ಕೆಯು ವಿಶೇಷವಾದದ್ದಾಗಿದೆ: "ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವನು ಆತನಲ್ಲಿ ನೆಲೆಗೊಂಡಿರುತ್ತಾನೆ, ಆತನು ಇವನಲ್ಲಿ ನೆಲೆಗೊಂಡಿರುತ್ತಾನೆ. ನಮ್ಮಲ್ಲಿ ನೆಲೆಗೊಂಡಿದ್ದಾನೆಂದು ಆತನು ನಮಗೆ ಅನುಗ್ರಹಿಸಿದ ಆತ್ಮನಿಂದಲೇ ಬಲ್ಲೆವು" (1 ಯೊಹಾನ 3:24). ಈ ವಚನವು ಆತನು ನಮ್ಮಲ್ಲಿ ಹೇಗೆ ವಾಸಿಸುವನು ಎಂಬುದನ್ನು, ವಾಕ್ಯದಲ್ಲಿ ಬರೆಯಲ್ಪಟ್ಟದ್ದರಿಂದಲೋ, ಇಲ್ಲವೇ ಬೇರೆ ಮಾರ್ಗದಿಂದಲೋ ಎಂಬುದನ್ನು ಹೇಳುವದಿಲ್ಲ. ಈ ಕಾರಣದಿಂದ, ಆತ್ಮನ ಪ್ರಸನ್ನತೆಯನ್ನು ತಿಳಿಯಲು ನಮಗೆ ಕಾರಣನಾಗುತ್ತಾನೆ ಎಂಬುದನ್ನು ಸಿದ್ಧಪಡಿಸಿ ತೋರಿಸಲು ಈ ವಚನವನ್ನು ಉಪಯೋಗಿಸಲಿಕ್ಕಾಗುವದಿಲ್ಲ.

ದೇವರ ಮಕ್ಕಳಾಗುವಂತೆ ಆಗಲು ಯೇಸುವಿನ ಚಿತ್ತಕ್ಕೆ ನಾವು ವಿಧೇಯರಾಗಿದ್ದರೆ (ಗಲಾತ್ಯ 3:26, 27), ಪರಿಶುದ್ಧಾತ್ಮನು ನಮಗೆ ಕೊಡಲ್ಪಡುವನು (ಗಲಾತ್ಯ 4:6) ಎಂಬ ಭರವಸೆ ನಮ್ಮದಾಗುತ್ತದೆ. ನಂಬಿಕೆಯ ಮುಖಾಂತರ ನಾವು ದೈವತ್ವದ ಆಂತರಿಕ ವಾಸಿಸುವಿಕೆಯ ಬಗ್ಗೆ ಬೈಬಲಿನ ಸತ್ಯವನ್ನು ಸ್ವೀಕರಿಸುತ್ತೇವೆ (ಎಫೆಸ 3:17). ದೇವರ ವಾಕ್ಯದ ಮೇಲೆ ಅವಲಂಭಿಸಿ, ನಾವು ಆತ್ಮವನ್ನು ನೋಡದಿದ್ದರೂ, ಅನುಭವಿಸದಿದ್ದರೂ ನಮ್ಮಲ್ಲಿ ಆಂತರ್ಯದಲ್ಲಿ ವಾಸಿಸುವ ಮಾನವ ಆತ್ಮಿಕ ಪ್ರತಿಯೊಬ್ಬರಲ್ಲಿರುವ ಸತ್ಯವನ್ನು ಸ್ವೀಕರಿಸಿ ಕೊಳ್ಳುತ್ತೇವೆ (ಜೆಕರ್ಯ 12:1), ಅದೇ ರೀತಿಯಲ್ಲಿ ಪರಿಶುದ್ಧಾತ್ಮನು ನಮ್ಮಲ್ಲಿ ನೆಲೆಗೊಳ್ಳುವದನ್ನು ನಾವು ಸ್ವೀಕರಿಸತಕ್ಕದ್ದು.

ನಮ್ಮಲ್ಲಿ ನೆಲೆಗೊಂಡಿರುವ ಪರಿಶುದ್ಧಾತ್ಮನ ಸಾನ್ನಿಧ್ಯವು ನಾವು ಭಾವಿಸುವಂಥದ್ದೂ ಇಲ್ಲವೇ ಅನುಭವ ಜ್ಞಾನದ ತಿಳುವಳಿಕೆಯ ಮೇಲೆ ಅವಲಂಭಿಸಿದ್ದು ಆಗಿದ್ದರೆ, ಪರಿಶುದ್ಧಾತ್ಮನು ಅವರಲ್ಲಿ ನೆಲೆಸಿದನು ಎಂದು ಪೌಲನು ಕೊರಿಂಥದವರಿಗೆ ಬರೆಯಬೇಕಾಗಿರಲಿಲ್ಲ (1 ಕೊರಿಂಥ 6:19). ಅದರ ಬದಲಾಗಿ, ಯಾವದೇ ಪ್ರತ್ಯಕ್ಷವಾದ ಭಾವನೆಯಿಂದ ಇಲ್ಲವೇ ಪ್ರದರ್ಶನದಿಂದ ಪರಿಶುದ್ಧಾತ್ಮನ ನೆಲೆಗೊಂಡಿರುವಿಕೆಯನ್ನು ಅವರು ತಿಳಿದಿದ್ದರು ಎಂದು ಹೇಳಬಹುದಿತ್ತು.

ಕ್ರೈಸ್ತರಾಗಿ ನಮಗೆ, ನಮ್ಮಲ್ಲಿ ಪರಿಶುದ್ಧಾತ್ಮನು ಇದ್ದಾನೆ. ನಾವು ಆತನಿಂದ ಮುದ್ರಿಸಲ್ಪಟ್ಟಿದ್ದೇವೆ ಹಾಗೂ ವಿಮೋಚನೆಯ ದಿನಕ್ಕಾಗಿ ಒಂದು ಸಂಚಕಾರವಾಗಿ ಸ್ವೀಕರಿಸಿದ್ದೇವೆ ಎಂಬ ಭರವಸೆ ದೇವರ ವಾಕ್ಯದಿಂದ ನಮಗಿರುತ್ತದೆ.

## ನಮ್ಮ ಜೀವಿತಗಳಲ್ಲಿ ಫಲಫಲಿಸುವುದು

ಆತ್ಮನ ಬೋಧನೆಯನ್ನು ಅನುಸರಿಸುವದರಿಂದ ಪರಿಶುದ್ಧಾತ್ಮನ ಫಲದಂತೆ ತಿಳಿದ ಹಲವಾರು ಗುಣಗಳನ್ನು ಬೆಳಿಸಿಕೊಳ್ಳಲು ಕ್ರೈಸ್ತರು ನಡಿಸಲ್ಪಡುವರು: "...

ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ; ..." (ಗಲಾತ್ಯ 5:22, 23; ನೋಡಿರಿ ರೋಮಾಪುರ 8:23). ಶರೀರದ ಅಪೇಕ್ಷೆಗಳನ್ನು ಮರಣಕ್ಕೆ ಒಪ್ಪಿಸುವದಷ್ಟೇ ಅಲ್ಲ (ಗಲಾತ್ಯ 5:24; ಎಫೆಸ 4:22; ಕೊಲೊಸ್ಸೆ 3:8), ಆದರೆ ಪರಿಶುದ್ಧಾತ್ಮನ ಫಲ ಎಂದು ಯಾದಿ ಮಾಡಿದ ಗುಣಲಕ್ಷಣಗಳನ್ನು ಬೆಳಿಸಿಕೊಳ್ಳತಕ್ಕದ್ದು (ಎಫೆಸ 4:23, 24; ಕೊಲೊಸ್ಸೆ 3:10-14). ಆತ್ಮಿಕ ಗುಣಲಕ್ಷಣಗಳನ್ನು ಹೊಂದಿಕೊಳ್ಳಬೇಕೆಂದು ನಮಗೆ ಆಜ್ಞಾಪಿಸಲ್ಪಟ್ಟದ್ದರಿಂದ, ಅವುಗಳನ್ನು ಬೆಳೆಸಿಕೊಳ್ಳುವ ಜವಾಬ್ದಾರಿಕೆ ನಮಗಿರುತ್ತದೆ:

| | |
|---|---|
| ಪ್ರೀತಿ | ಯೋಹಾನ 13:34; ಕೊಲೊಸ್ಸೆ 3:14 |
| ಆನಂದ | ಫಿಲಿಪ್ಪಿ 4:4; 1 ಥೆಸಲೊನೀಕ 5:16 |
| ಸಮಾಧಾನ | ಫಿಲಿಪ್ಪಿ 4:6, 7; ಇಬ್ರಿಯ 12:14 |
| ತಾಳ್ಮೆ | 2 ಕೊರಿಂಥ 6:6; ಎಫೆಸ 4:2 |
| ದಯೆ | ಕೊಲೊಸ್ಸೆ 3:12; 2 ಪೇತ್ರ 1:7 |
| ಒಳ್ಳೆಯತನ | ಎಫೆಸ 5:9; 2 ಥೆಸಲೊನೀಕ 1:11 |
| ನಂಬಿಕೆ | ಪ್ರಕಟನೆ 2:10ಸಿ |
| ಸಾಧುತ್ವ | 1 ತಿಮೊಥೆ 6:11; ತೀತ 3:2 |
| ದಮೆ | 2 ಪೇತ್ರ 1:6 |

ಪರಿಶುದ್ಧಾತ್ಮ ಫಲವು ಅದ್ಭುತಕರವಾಗಿ ನಮಗೆ ಕೊಡಲ್ಪಡುವುದು ಎಂದು ಪೌಲನು ಬರೆಯಲಿಲ್ಲ. ಆತ್ಮಿಕ ಗುಣಗಳನ್ನು ನಾವು "ಧರಿಸಿಕೊಳ್ಳಬೇಕು" ಎಂದು ಅವನು ಹೇಳಿದನು (ಕೊಲೊಸ್ಸೆ 3:12).

## ಐಕ್ಯತೆಗೆ ನಮ್ಮ ತಳಹದಿಯನ್ನು ಒದಗಿಸುವನು

ಯೇಸುವಿನ ಶಿಷ್ಯರಾಗಿ ನಾವು "ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟ ವರಾಗಿದ್ದು ಪರಿಶುದ್ಧಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಆಸಕ್ತ ರಾಗಿರಬೇಕು" (ಎಫೆಸ 4:3). ಪರಿಶುದ್ಧಾತ್ಮನು ಒಬ್ಬನೇಯಾಗಿದ್ದು (ಎಫೆಸ 4:4) ಒಂದೇ ವಿಶ್ವಾಸವನ್ನು ಹುಟ್ಟಿಸುವ ಬೋಧನೆಯ ಐಕ್ಯದಂತೆ (ಎಫೆಸ 4:5), ಸತ್ಯವನ್ನು ಪ್ರಕಟಿಸಿದ್ದಾನೆ (ಯೋಹಾನ 16:13). "ದೇವ ಜನರಿಗೆ ಶಾಶ್ವತ ವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳ್ಳುವದಕ್ಕೆ ನಾವು ಹೋರಾಡಿದರೆ" (ಯೂದ 3), ಆಗ ಪರಿಶುದ್ಧಾತ್ಮನು ನಮಗಾಗಿ ಸಾಧ್ಯಮಾಡಿದ ಐಕ್ಯತೆಯನ್ನು ಕಾಪಾಡಿಕೊಳ್ಳಲು ಹುಡುಕುವವರಾಗಿದ್ದೇವೆ. ಐಕ್ಯತೆಯು ಸರಿಯಾದ ಮನೋ ಭಾವನೆ (ಎಫೆಸ 4:1-3) ಮತ್ತು ಸರಿಯಾದ ರಚನೆ (ಎಫೆಸ 4:4-6) ಎರಡರ ಮೇಲೂ ಅವಲಂಭಿಸಿರುತ್ತದೆ.

ನಮ್ಮ ಐಕ್ಯತೆಯು ಯೇಸುವಿನಂತೆ ನಾವು ಬೆಳೆಯುವದರ ಮೇಲೆ ಅವಲಂಭಿಸಿರುತ್ತದೆ (ಎಫೆಸ 4:13). ಯೇಸುವಿನಂತೆ ನಾವಾಗುವ ಮಟ್ಟಕ್ಕೆ ನಮಗೆ ಆತ್ಮನ ಐಕ್ಯತೆಯಿರುವುದು, ಯೇಸುವಿನ ಕಡೆಗೆ ಎಳೆಯಲ್ಪಡುವದರಿಂದ (ಯೋಹಾನ 12:32) ಮತ್ತು ಒಬ್ಬನೇ ಕುರುಬನಂತೆ ಆತನನ್ನು ಹಿಂಬಾಲಿಸುವದರಿಂದ (ಯೋಹಾನ 10:11, 14) ನಾವು ಒಂದೇಯಾಗಬಹುದು. ಯೇಸುವಿನಿಂದ ನಮ್ಮನ್ನು ದೂರಕ್ಕೆ ಎಳೆ ಯುವ ಕುರುಬರನ್ನು ಹಿಂಬಾಲಿಸುವದರಿಂದ ನಾವು ಚದರಿಸಲ್ಪಟ್ಟವರೂ ವಿಭಾಗವಾ

ದವರೂ ಆಗುವೆವು (ಅಪೊಸ್ತಲರ ಕೃತ್ಯ 20:29, 30). ಪರಿಶುದ್ಧಾತ್ಮನ ಕಾರ್ಯವು ಮಾತ್ರವೇ ನಮಗಾಗಿ ಯೇಸುವು ಬಯಸುವ ಐಕ್ಯತೆಯ ತಳಹದಿಯಾಗಿದೆ (ಯೋಹಾನ 17:20-23).

## ಆತ್ಮಿಕ ಯುದ್ಧಕ್ಕಾಗಿ ನಮಗೆ ಆಯುಧ ಕೊಡುವವನು

ಎಫೆಸ 6:11 ಕ್ರೈಸ್ತರಿಗೆ, "ಸೈತಾನನ ತಂತ್ರೋಪಾಯಗಳನ್ನು ನೀವು ಎದುರಿಸಿ ನಿಲ್ಲುವದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ" ಎಂದು ಹೇಳುತ್ತದೆ. ನಮ್ಮ ಆಯುಧದ ಭಾಗವಾಗಿ ಇರುವ ಆತ್ಮನ ಖಡ್ಗವು ದೇವರ ವಾಕ್ಯವಾಗಿದೆ (ಎಫೆಸ 6:17). ಈ ಆತ್ಮನ ಖಡ್ಗವು ವಿರೋಧಿಸಲಿಕ್ಕೂ ರಕ್ಷಿಸಿಕೊಳ್ಳಲಿಕ್ಕೂ ಎರಡಕ್ಕೂ ಉಪಯೋಗಿಸಬಹುದು. ವಾಕ್ಯವನ್ನು ರಕ್ಷಿಸಿಕೊಳ್ಳುವ ಉಪಯೋಗವನ್ನು ಕುರಿತು ದಾವೀದನು ಬರೆದನು: "ನಿನಗೆ ವಿರೋಧವಾಗಿ ಪಾಪ ಮಾಡದಂತೆ ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ" (ಕೀರ್ತನೆ 119:11). ಆಕ್ರಮಣಕಾರಿ ಉಪಯೋಗವು ಸುವಾರ್ತೆಯನ್ನು ಪ್ರಸರಿಸುವ ಅದರ ಶಕ್ತಿಯಲ್ಲಿ ಕಂಡುಬರುತ್ತದೆ (ಅಪೊಸ್ತಲರ ಕೃತ್ಯ 8:4).

ಆತ್ಮನ ಖಡ್ಗವು ನಮ್ಮ ವೈರಿಯಾದ ಸೈತಾನನ್ನು ಸೋಲಿಸುವುದಕ್ಕಾಗಿ ಉಪಯೋಗಿಸಲ್ಪಡಬೇಕು. ಈ ರೀತಿಯಲ್ಲಿ, ಪರಿಶುದ್ಧಾತ್ಮನು ನಮಗೆ ಆಯುಧಗಳ್ನು ಒದಗಿಸುವದರಿಂದ ಪಾಪಕ್ಕೆವಿರುದ್ಧವಾಗಿ ಹೋರಾಡಲು ಬಾಹ್ಯವಾಗಿ ಸಹಾಯ ಮಾಡುತ್ತಾನೆ. ನಮ್ಮ ಆಯುಧಗಳನ್ನು ಉಪಯೋಗಿಸುತ್ತಿರುವಾಗ ಆಂತರಿಕ ಬಲವನ್ನು ಕೊಡುವದರಿಂದ ಆತನು ಆಂತರಿಕವಾಗಿ ಸಹಾಯ ಮಾಡುತ್ತಾನೆ (ಎಫೆಸ 3:16; 1 ಯೋಹಾನ 4:4).

## ನಮ್ಮ ಆರಾಧನೆ ಮತ್ತು ಸೇವೆಯಲ್ಲಿ ನಮ್ಮನ್ನು ನಡಿಸುವವನು

ನಾವು "ಆತ್ಮನಿಂದ ಆರಾಧಿಸಬೇಕು" (ಫಿಲಿಪ್ಪಿ 3:3). ಈ ವಾಕ್ಯಭಾಗದಲ್ಲಿ "ಆರಾಧನೆ" ಎಂಬುದು *latreuo* ಎಂಬುದರ ಭಾಷಾಂತರವಾಗಿದೆ. ಇದು ಬೇರೆ ಕಡೆಯಲ್ಲಿ "ಸೇವೆ ಮಾಡು" ಎಂದು ಹದಿನಾರು ಸಲ ಮತ್ತು "ಆರಾಧನೆ" ಎಂದು ಮೂರು ಸಲ ಭಾಷಾಂತರಿಸಲ್ಪಟ್ಟಿದೆ. ನಮ್ಮ ಸೇವೆಯು ಆತ್ಮನಿಂದ ನೇಮಿಸಲ್ಪಟ್ಟ ಮಿತಿಯಲ್ಲಿ ಇರಬೇಕು. ಕರ್ತನಲ್ಲಿ ನಮ್ಮ ಶ್ರಮೆಯು ವ್ಯರ್ಥವಾಗಿ ಹೋಗಬಾರದಂತೆ (1 ಕೊರಿಂಥ 15:58) ಆತ್ಮನಲ್ಲಿ ನಾವು ಮಾಡುವ ಸೇವೆಯು ದೇವರಿಗೆ ಬೆಲೆಯುಳ್ಳದ್ದಾಗಿದೆ.

ಒಂದು ಭಿನ್ನವಾದ ಪದವು *proskuneo* ("ಆರಾಧನೆ" ಎಂದು ಭಾಷಾಂತರಿಸಲ್ಪಟ್ಟದ್ದು) ದೇವರಿಗೆ ನಾವು ಸಂದಿಸುವದಕ್ಕೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ (ಯೋಹಾನ 4:23, 24). ನಮ್ಮ ಆರಾಧನೆಯು, ಯೇಸುವಿನೊಂದಿಗೆ ಪ್ರಾರಂಭವಾದ (ಯೋಹಾನ 1:14, 17; 14:6) ಮತ್ತು ಆತ್ಮನಿಂದ ಪ್ರಕಟಿಸಲ್ಪಟ್ಟ (ಯೋಹಾನ 16:13) ಸತ್ಯದೊಂದಿಗೆ ಅನುಗುಣವಾಗಿ ಮಾನವ ಆತ್ಮನಿಂದ ಹೊರಡತಕ್ಕದ್ದು. ನಮ್ಮ ಸೇವೆಯು ಪರಿಶುದ್ಧಾತ್ಮನಲ್ಲಿ ಕಂಡುಬಂದ ಪರಿಶುದ್ಧಾತ್ಮನ ಕ್ಷೇತ್ರದೊಳಗಿರಬೇಕು.

## ನಮ್ಮನ್ನು ಶುದ್ಧೀಕರಿಸುವವನು

ಕ್ರೈಸ್ತರಾಗಿ, ನಾವು ಪರಿಶುದ್ಧಾತ್ಮನಿಂದ ಶುದ್ಧೀಕರಿಸಲ್ಪಟ್ಟಿರುತ್ತೇವೆ:

> ಕರ್ತನಿಗೆ ಪ್ರಿಯರಾಗಿರುವ ಸಹೋದರರೇ, ನೀವು ಪರಿಶುದ್ಧಾತ್ಮನಿಂದ ಶುದ್ಧೀಕರಿಸಲ್ಪಟ್ಟವರಾಗಿ ಸತ್ಯದ ಮೇಲೆ ನಂಬಿಕೆಯಿಟ್ಟು ರಕ್ಷಣೆಯನ್ನು ಪಡೆಯುವದಕ್ಕಾಗಿ ದೇವರು ನಿಮ್ಮನ್ನು ಆದಿಯಿಂದ ಆರಿಸಿಕೊಂಡದರಿಂದ ನಾವು ನಿಮ್ಮ ವಿಷಯದಲ್ಲಿ ಯಾವಾಗಲೂ ದೇವರಿಗೆ ಕೃತಜ್ಞತಾಸ್ತುತಿ ಮಾಡುವದಕ್ಕೆ ಬದ್ಧರಾಗಿದ್ದೇವೆ (2 ಥೆಸಲೊನೀಕ 2:13).

> ಪರಿಶುದ್ಧಾತ್ಮನಿಂದ ಪ್ರತಿಷ್ಠಿಸಲ್ಪಟ್ಟವರಾಗಿ ದೇವರಿಗೆ ವಿಧೇಯರಾಗುವದಕ್ಕೂ ಯೇಸು ಕ್ರಿಸ್ತನ ರಕ್ತದಿಂದ ಪ್ರೋಕ್ಷಿತರಾಗುವದಕ್ಕೂ ತಂದೆಯಾದ ದೇವರ ಭವಿಷ್ಯದ್ ಜ್ಞಾನಾನುಸಾರವಾಗಿ ಆರಿಸಿಕೊಳ್ಳಲ್ಪಟ್ಟವರಿಗೆ ... (1 ಪೇತ್ರ 1:2).

ಸತ್ಯದ ವಾಕ್ಯವನ್ನು ನಮಗೆ ಆತನು ತರುವದರ ಮುಖಾಂತರ ಶುದ್ಧೀಕರಣದ ಆಶೀರ್ವಾದವು ಬರುತ್ತದೆ, ಇದು ನಮ್ಮನ್ನು ಶುದ್ಧೀಕರಿಸುವುದು ಎಂದೂ ಹೇಳಲ್ಪಟ್ಟಿದೆ (ಯೋಹಾನ 17:17), ಇಲ್ಲವೇ ದೇವರ ವಿಶೇಷ ಉದ್ದೇಶಕ್ಕೆ ಪ್ರತ್ಯೇಕಿಸಿಡುವುದು ಎಂದೂ ಹೇಳಲ್ಪಟ್ಟಿದೆ.[3]

ಕ್ರೈಸ್ತರಾಗಿ ನಾವು ಈ ಲೋಕದ ಪಾಪಭರಿತ ಗುರಿಗಳಿಗೆ ನಮ್ಮನ್ನು ಸಮರ್ಪಿಸಿ ಕೊಳ್ಳಬಾರದು, ಆದರೆ ನಾವು ಯೇಸುವಿನ ಸಾರೂಪ್ಯಕ್ಕೆ ಮಾರ್ಪಡಿಸಲ್ಪಡಬೇಕು (ರೋಮಾಪುರ 12:1, 2; 2 ಕೊರಿಂಥ 3:17, 18). ಈ ಪರಿಶುದ್ಧತೆಯನ್ನು ಬೆಳಸಿ ಕೊಳ್ಳುವುದು (2 ಕೊರಿಂಥ 7:1) ನಮ್ಮ ಜವಾಬ್ದಾರಿಕೆಯಾಗಿರುತ್ತದೆ. ಪರಿಶುದ್ಧಾತ್ಮನ ಪ್ರಕಟಿತ ವಾಕ್ಯದಿಂದ ನಾವು ನಡಿಸಲ್ಪಡುವಾಗ, ನಾವು ಶುದ್ಧೀಕರಿಸಲ್ಪಟ್ಟವರಾಗು ತ್ತೇವೆ, ನಮ್ಮ ಸುತ್ತಲಿನ ದುಷ್ಟ ಜಗತ್ತಿನಿಂದ ಬೇರೆಯಾಗಿಡಲ್ಪಡುತ್ತೇವೆ, ಯಾಕಂದರೆ ನಾವು ಪರಿಶುದ್ಧಾತ್ಮನ ಫಲವನ್ನು ಬೆಳಿಸಿಕೊಂಡಿರುತ್ತೇವೆ.

ಪಾತ್ರೆಗಳನ್ನು ಒರೆಸಲಿ, ನೆಲವನ್ನು ಒರೆಸಲು, ಇಲ್ಲವೇ ಕಿಟಿಗಳ ಹೊಲಸು ತೆಗೆಯಲು ನಾವು ಬಟ್ಟೆಯನ್ನು ಉಪಯೋಗಿಸಬಹುದು. ಹೀಗಿದ್ದರೂ, ದೇಶದ ನಿಶಾನೆಯನ್ನು ಮುದ್ರಿಸಿದ ಬಟ್ಟೆಯು ಅಂಥ ಸಾಧಾರಣ ಕೆಲಸಗಳಿಗಾಗಿ ಉಪಯೋಗಿಸಲ್ಪಡುವದಿಲ್ಲ. ಅದು ಆ ರಾಷ್ಟ್ರವನ್ನು ಪ್ರತಿನಿಧೀಕರಿಸುವ ಉನ್ನತ ಸ್ಥಾನಕ್ಕೆ ಸಮರ್ಪಿಸಲ್ಪಟ್ಟಿರುತ್ತದೆ. ನಿಶಾನೆಯು ಬೇರೆ ಬಟ್ಟೆ ತುಂಡುಗಳಿಗಿಂತ ಬೇರೆಯಾಗಿ ಇಡಲ್ಪಟ್ಟಂತೆ ಕ್ರೈಸ್ತರು ಯಿತರ ಜನರಿಂದ ಪ್ರತ್ಯೇಕಿಸಲ್ಪಟ್ಟಿದ್ದಾರೆ. ಅವರು ಶುದ್ಧೀಕರಿಸಲ್ಪಟ್ಟಿದ್ದಾರೆ, ಇಲ್ಲವೇ ಪ್ರತಿಷ್ಠಿಸಲ್ಪ ಟ್ಟಿದ್ದಾರೆ. ಪರಿಶುದ್ಧಾತ್ಮನ ಕಾರ್ಯದ ಮುಖಾಂತರ ದೇವರ ಮಹಾ ಉದ್ದೇಶಗಳ ಸೇವೆ ಮಾಡುವದಕ್ಕಾಗಿ ಇಡಲ್ಪಟ್ಟಿದ್ದಾರೆ. ಲೋಕದ ಸಂಗತಿಗಳಿಗಾಗಿ ನಾನಿನ್ನು ಉಪಯೋ ಗಿಸಲ್ಪಡಬಾರದು. ಪರಿಶುದ್ಧಾತ್ಮನಿಂದ ನೇಮಿಸಲ್ಪಟ್ಟ ಮಿತಿಗಳಿಗೆ ಅನುಗುಣವಾಗಿ ಯೇಸುವಿಗೆ ಸೇವೆ ಮಾಡಲು ನಮ್ಮನ್ನು ಮುಡುಪಾಗಿಟ್ಟು ಕೊಳ್ಳಬೇಕು.

## ಮುಕ್ತಾಯ

ಕ್ರೈಸ್ತರಂತೆ ನಮ್ಮ ಜೀವಿತಗಳಲ್ಲಿ ಪರಿಶುದ್ಧಾತ್ಮನು ಮಹತ್ವದ ಪಾತ್ರವನ್ನು ವಹಿಸುತ್ತಾನೆ. ಆತ್ಮನ ಮುಖಾಂತರ ಪ್ರಕಟನೆಯಿಂದ, ಮಾರ್ಗದರ್ಶನದಿಂದ, ಬಲದಿಂದ ಮತ್ತು ಇತರ ಅನೇಕ ಲಾಭಗಳಿಂದ ನಾವು ಆಶೀರ್ವದಿಸಲ್ಪಟ್ಟಿದ್ದೇವೆ. ಪರಿಶುದ್ಧಾ ತ್ಮನು ಕೊಟ್ಟ ಸತ್ಯಗಳನ್ನು ನಾವು ಅನುಸರಿಸುವಾಗ, ತನ್ನ ಕಾರ್ಯದ ಮುಖಾಂತರ ಆತನು ನಮ್ಮ ಜೀವಿತಗಳನ್ನು ಆಶೀರ್ವದಿಸುತ್ತಾನೆ. ಕ್ರಿಸ್ತನಲ್ಲಿ ನೂತನ ಜೀವನದ ಪ್ರಾರಂಭ ಮತ್ತು ಮುಂದುವರಿಕೆಯು ಸಾಧ್ಯವಾಗುವಂತೆ ಪ್ರತಿಯೊಂದನ್ನು ಮಾಡಿದ

ಪವಿತ್ರಾತ್ಮನಿಗೆ ನಾವು ಋಣಬದ್ಧರಾಗಿದ್ದೇವೆ. ತಂದೆ, ಕುಮಾರ ಮತ್ತು ಪವಿತ್ರಾತ್ಮ ನೊಂದಿಗೆ ಪರಲೋಕದಲ್ಲಿ ಜೀವಿಸಲು ಪ್ರವೇಶಿಸುವುದು ಆತ್ಮನ ಮಹಾ ಕಾರ್ಯದ ಮೇಲೆ ಅವಲಂಭಿಸಿರುತ್ತದೆ.

ಟಿಪ್ಪಣಿಗಳು

[1]Barklay M. Newman and Eugene A. Nida, *A Translator's Handbook on Paul's Letter to the Romans* (London: United Bible Society, 1973), 164. [2]Everett F. Harrison, "Romans," *The Expositor's Bible Commentary,* vol. 10, *Romans-Galatians,* gen. ed. Frank E. Gaebelein (Grand Rapids, Mich.: Zondervan, 1976), 96. [3]ಕ್ರಿಯಾಪದ ಮೂಲವು *hagiazo* ಎಂಬುದನ್ನು ರೂಪಿಸುತ್ತದೆ. "ಶುದ್ಧೀಕರಿಸು" ಎಂದರ್ಥಕೊಡುತ್ತದೆ (ಅದರ ಏಕಮೂಲದ ರೂಪಗಳು ವಿಶೇಷಗಳಾಗಿವೆ: *hagios,* "ಪವಿತ್ರ" ಇಲ್ಲವೇ "ಪವಿತ್ರರು" ಮತ್ತು ನಾಮಪದವು *hagiasmos* ಎಂದಿದೆ, "ಶುದ್ಧೀಕರಣ"), ಅರ್ಥ "ಪ್ರತ್ಯೇಕವಾಗಿಡು" ಇಲ್ಲವೇ ಒಂದು ವಿಶೇಷ ಉದ್ದೇಶಕ್ಕಾಗಿ "ಪ್ರತಿಷ್ಠಿಸು."

© 2009 Truth for Today